<u>ದಿನಾಂಕ 13.09.2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>

**<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಜೆ. ರವರಿಂದಃ</u>**

ನಾನು ಪಂಚಾಯ್ತಿಗೆ ಬಡಾವಣೆ ನಕ್ಷೆ ಕೊಡಿ ಎಂದು ಅರ್ಜಿ ಸಲ್ಲಿಸಿರುವುದಿಲ್ಲ. ನಾನು ನಿವೇಶನಗಳ ಹಂಚಿಕೆಯ ಪುಸ್ತಕದ ವಹಿಯನ್ನು ಕೋರಿ ಯಾವುದೇ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಬಿ.ಡಿ.ಒ., ಟಿ. ನರಸೀಪುರವರಿಗೆ ವಾಸಕ್ಕೆ ಸ್ಥಳ ಇಲ್ಲ, ಸೈಟು ಮಂಜೂರು ಮಾಡಿಕೊಡಿ ಎಂದು ಅರ್ಜಿ ಸಲ್ಲಿಸಿದ್ದೆ. ಸದರಿ ಅರ್ಜಿಯ ಸ್ವೀಕೃತಿ ನಕಲು ನನ್ನ ಬಳಿ ಇದೆ. ಬಡಾವಣೆ ನಕಾಶೆ, ಹಂಚಿಕೆಯ ಪುಸ್ತಕ ಗ್ರಾಮ ಪಂಚಾಯ್ತಿಯಲ್ಲಿ ಸಿಗುತ್ತವೆ ಎಂದರೆ ಸರಿ. ನನಗೆ ಅರ್ಜಿ ಹಾಕಿ ಸದರಿ ದಾಖಲೆಗಳನ್ನು ತಂದುಕೊಡಲು ತೊಂದರೆ ಇಲ್ಲ. ನಾನು ಹಕ್ಕುಪತ್ರದ ದಾಖಲೆ ನೋಡಿ ಚೆಕ್ಕು ಬಂದಿ ನಮೂದಿಸಿದ್ದೇನೆ. ನನ್ನ ಬಳಿ ಚೆಕ್ಕು ಬಂದಿ ತೋರಿಸಲು ಹಕ್ಕು ಪತ್ರ ಅಥವಾ ಬೇರೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ನನ್ನ ಆಸ್ತಿ ಪ್ರತಿವಾದಿಗೆ ಬರಬೇಕೆಂದು ಪ್ರತಿವಾದಿ ನನಗೆ ನೋಟೀಸು ನೀಡಿರುವುದಿಲ್ಲ. ಆದರೆ ಪ್ರತಿವಾದಿ ನನ್ನ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆ. ಪ್ರತಿವಾದಿ ನನ್ನ ಸ್ವಾಧೀನಕ್ಕೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿರುವ ವ್ಯಕ್ತಿ ಸಿದ್ಧಶೆಟ್ಟಿ ಅದರಲ್ಲಿ ಒಂದು ಬೋರ್ ವೆಲ್ ಇದೆ ಹಾಗೂ ಹುಲ್ಲು ಮೆದೆ ಇದೆ ಎಂದು ಒಪ್ಪಿಕೊಂಡಿದ್ದು, ಸದರಿ ಫೋಟೋವನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ.2 ಎಂದು ಗುರುತಿಸಲಾಯಿತು. ಎಲ್ಲಾ ಸೈಟುಗಳಿಗೂ ಕಲ್ಲು ಹಾಕಿ ನಂಬರ್ ಹಾಕಿದ್ದಾರೆ ಎಂದರೆ ಸರಿ. ನಿ.ಡಿ.1 ರಲ್ಲಿ ಕಾಣುತ್ತಿರುವ ಜಮೀನು ಪ್ರತಿವಾದಿಗೆ

ಸೇರಿದ್ದು, ಸದರಿ ಜಮೀನನ್ನು ನಾವು ಲಪಟಾಯಿಸಲು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಸೈಟಿಗೆ ನೆಡಲಾಗಿದ್ದ ಕಲ್ಲುಗಳನ್ನು ದಾವೆ ಹಾಕುವ ಪೂರ್ವದಲ್ಲಿ ಕಿತ್ತುಹಾಕಿದ್ದಾರೆ. ಪ್ರತಿವಾದಿ ಎಲ್ಲಾ ಸೈಟುಗಳಲ್ಲಿ ನೆಡಲಾಗಿದ್ದ ಕಲ್ಲುಗಳನ್ನು ದಾವೆ ಹಾಕುವ ಪೂರ್ವದಲ್ಲಿ ಕಿತ್ತುಹಾಕಿದ್ದಾರೆ. ಕಲ್ಲು ಎಲ್ಲಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಕಲ್ಲುಗಳನ್ನು ಕಿತ್ತುಹಾಕಿದ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿಲ್ಲ. ನಾನು ವಕೀಲರ ಮೂಲಕ ಪ್ರತಿವಾದಿಗೆ ಕಲ್ಲು ಕಿತ್ತು ಹಾಕಿದ ಬಗ್ಗೆ ನೋಟೀಸು ನೀಡಿಲ್ಲ. ಪ್ರತಿವಾದಿ ಕಲ್ಲುಗಳನ್ನು ಕಿತ್ತು ಹಾಕಿಲ್ಲ, ನನ್ನ ಸೈಟು ಇಮಾಮ್ ಶರೀಫರ ಜಮೀನಿನಲ್ಲಿ ಈಗಲೂ ಸಹ ಇದೆ, ಪ್ರತಿವಾದಿಯ ಜಮೀನನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು,<br>
ಟಿ ನರಸೀಪುರ.